ಓ ಎಸ ನಂಃ 98-109/2017.

ಡಿ.ಡಬ್ಲ್ಯು. 3

ಇಂದು ದಿಃ 27.11.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಅಸಲು ದಾವೆ 98/2017 ರ ವಾದಿ ಪರ ಶ್ರೀ.ಎಸ ಸಿ ಕೆ, ವಕೀಲರಿಂದ,**

1. ನಾನು ನಿವೃತ್ತ ಶಾಲಾ ಶಿಕ್ಷಕ ಆಗಿರುತ್ತೇನೆ. ನಾನು ಖಾಯಂ ಆಗಿ ಕೋಗಿಲಗೇರೆ ಗ್ರಾಮದ ನಿವಾಸಿಯಾಗಿದ್ದೇನೆ ಎಂದರೆ ಸರಿ. ಈ ದಾವೆಯನ್ನು ಅಸಲು ದಾವೆ 98/2017 ರ ವಾದಿಗಳು ಜಮೀನುಗಳ ಕುರಿತು ಮಾಡಿದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಶಿವರಾಯಪ್ಪ ಸಳಕೆನವರ ಇವರಿಗೆ ಪಕೀರಪ್ಪ, ಬಸವರಾಜ, ಕೇದಾರಿ, ಹನುಮಂತಪ್ಪ ಎಂಬ ಮಕ್ಕಳು ಇದ್ದರು. ಸದರಿ ದಾವೆಯ 2 ನೇ ವಾದಿಯಾದ ಯಲ್ಲವ್ವ ಮತ್ತು ಪಕೀರಪ್ಪನ ಮದುವೆಯನ್ನು ನಾವೆ ಮಾಡಿದ್ದೇವೆ. ನಾನು ಮತ್ತು ಸದರಿ ಪಕೀರಪ್ಪನ ತಾಯಿ ಸೇರಿ ಯಲ್ಲವ್ವ ಇವಳನ್ನು ಕರೆಯಲು ಶಿಬಾರಗಟ್ಟಿ ಗ್ರಾಮಕ್ಕೆ ಹೋಗಿದ್ದೆವು. ಸದರಿ ಪಕೀರಪ್ಪ ಮತ್ತು ಯಲ್ಲವ್ವ ಸೇರಿ ಕೋಗಿಲಗೆರೆ ಗ್ರಾಮದಲ್ಲಿ 3 ವರುಷಗಳ ಕಾಲ ದಾಂಪತ್ಯ ಜೀವನ ಮಾಡಿದ್ದಾರೆ ಎಂದರೆ ಸರಿಯಲ್ಲ.

2. ದಾವಾ ಎರಡು ಜಮೀನುಗಳಲ್ಲಿ 2010 ರಲ್ಲಿ ಸದರಿ ಅಸಲು ದಾವೆ 98/2017 ರ 1 ನೇ ವಾದಿಯಾದ ಮಂಜುನಾಥನ ಹೆಸರುಗಳು ಹತ್ತಿರುತ್ತವೆ ಎಂದರೆ ಇರಬಹುದು. ನಮಗೆ ನ್ಯಾಯಾಲಯದಿಂದ ಕರೆಯಾಜ್ಞೆ ಬಂದಿರುವುದಿಲ್ಲ ಆದರೆ ಸ್ವಇಚ್ಚೆಯಿಂದ ಬಂದಿರುತ್ತೇನೆ. ನಾನು ಹಿಂದಿನ ದಿನಗಳಲ್ಲಿ ಹಾಗೂ ಈ ದಿನ ನ್ಯಾಯಾಲಯಕ್ಕೆ 2 ನೇ ಪ್ರತಿವಾದಿಯಾದ ಹನಮಂತಪ್ಪ ಸಳಕೆನವರ ಜೊತೆ ಬಂದಿದ್ದೇನೆ ಎಂದರೆ ಸರಿ. ಸದರಿ ಪಕೀರಪ್ಪನಿಗೆ ಯಾವ ಕಾಯಿಲೆ ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಪಕೀರಪ್ಪ ಯಲ್ಲವ್ವನೊಂದಿಗೆ ಮದುವೆ ಮಾಡಿಕೊಳ್ಳುವಾಗ ಅವನ ಆರೋಗ್ಯ ಸರಿ ಇರಲಿಲ್ಲ. ಸಾಕ್ಷಿ

ಮುಂದುವರೆದು ನುಡಿಯುತ್ತಾರೆ ದೀರ್ಘಾವದಿ ಅನಾರೋಗ್ಯ ಇರಲಿಲ್ಲ ಎಂದು. ಸದರಿ ಪಕೀರಪ್ಪ ಮತ್ತು ಯಲ್ಲವ್ವನ ದಾಂಪತ್ಯ ಜೀವನದಿಂದ 2 ನೇ ವಾದಿಯಾದ ಮಂಜುನಾಥ ಜನಿಸಿದ್ದಾನೆ ಎಂದರೆ ಸರಿಯಲ್ಲ. ಸದರಿ 2 ನೇ ವಾದಿಯ ಮತದಾರರ ಗುರುತಿನ ಚೀಟಿಯಲ್ಲಿ ಅವನ ತಂದೆಯ ಹೆಸರು ಪಕೀರಪ್ಪ ಸಳಕೆನವರ ಎಂದು ಬರೆದಿದ್ದಾರೆಂದರೆ ನನಗೆ ಗೊತ್ತಿಲ್ಲ. ನಿಪಿಃ 1 ರಿಂದ 3 ರಲ್ಲಿ 1 ನೇ ವಾದಿಯ ತಂದೆಯ ಹೆಸರು ಪಕೀರಪ್ಪ ಎಂದು ನಮೂದು ಮಾಡಿದ್ದಾರೆ ಎಂದರೆ ಸರಿ. ನನಗೆ ಎಲ್ಲ ನಿಜಸಂಗತಿಗಳು ಗೊತ್ತಿದ್ದರೂ ಕೂಡಾ ಈಗ ಸದರಿ 2 ನೇ ಪ್ರತಿವಾದಿಯಾದ ಹನಮಂತಪ್ಪನ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಅದೆ.

2 ನೇ ಹೆ ಹಿ ದಿ ನ್ಯಾ ಮತ್ತು ಜೆಎಂಎಫಸಿ
ಧಾರವಾಡ.